| ಓ ಎಸ್ | 48/2014 | ಪಿ.ಡಬ್ಲ್ಯೂ: 1 |
|---|---|---|

ಇಂದು ದಿಃ 29/11/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಸಿ ಡಿ ಕೆ ವಕೀಲರಿಂದಃ-

2 ಭೋಗ್ಯಪತ್ರದ ಬಗ್ಗೆ ನನಗೆ ಗೊತ್ತಿತ್ತು ಎಂದು ಹೇಳಿರುವ ಕುರಿತು ನನಗೆ ಈ ದಾವೆ ದಾಖಲಿಸುವ ಎಷ್ಟು ವರ್ಷ ಹಿಂದೆ ಗೊತ್ತಿತ್ತು ಎಂದು ಕೇಳಿದರೆ 4-5 ವರ್ಷದ ಹಿಂದೆ ಗೊತ್ತಿತ್ತು ಎಂದು ನುಡಿಯುತ್ತೇನೆ. ನಾನು ಹಾಜರುಪಡಿಸಿರುವ ಆರ್ ಟಿ ಸಿ ಗಳಲ್ಲಿ ಏನು ನಮೂದು ಇದೆ ಎಂದು ಗೊತ್ತು. ಮಾದಮ್ಮ ಕೋಂ ಬುಂಡಯ್ಯನ ಮಾದಯ್ಯ ಎಂದು ಆರ್ ಟಿ ಸಿ ಯಲ್ಲಿ ಇರಬೇಕಾಗಿರುವುದು ತಪ್ಪಾಗಿ ಮಾದಮ್ಮ ಕೋಂ ಬುಂಡಯ್ಯ ಎಂದು ಇರುವುದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಕ್ಲೇಮ್ ಮಾಡುತ್ತಿರುವುದು ಎಂದರೆ ಸರಿಯಲ್ಲ. ಕಲಂ ನಂ.9 ಮತ್ತು 12 ರಲ್ಲಿ ಆರ್ ಟಿ ಸಿ ಯಲ್ಲಿ ದಾವಾ ಸ್ವತ್ತಿನ ಕುರಿತು ಎಷ್ಟು ಜನರ ಹೆಸರು ದಾಖಲಾಗಿದೆ ಎಂದು ಗೊತ್ತು. ಆರ್ ಟಿ ಸಿ ಖಾತಾ ಪ್ರಶ್ನಿಸಿ ಕಂದಾಯ ಮೇಲ್ಮನವಿ ಸಲ್ಲಿಸಿಲ್ಲ.

28/3/1970 ರ ಮತ್ತು 8/10/1975 ರ ಎರಡು ಭೋಗ್ಯಪತ್ರದ ಜಮೀನುಗಳನ್ನು ಬುಂಡಯ್ಯ ಪುಟ್ಟಮಾದಯ್ಯನ ಪತ್ನಿ ಮಾದಮ್ಮ ಮತ್ತು ಆಕೆಯ ಮಗ ಮಹದೇವ 7 ನೇ ಪ್ರತಿವಾದಿ ರಂಗಯ್ಯ ರವರಿಗೆ ಅಗ್ರಿಮೆಂಟ್ ಮೂಲಕ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ.

ಲಿಖಿತ ತಕರಾರಿನಲ್ಲಿ ಪ್ರತಿವಾದಿ 7 ರವರು ಕಾಣಿಸಿದ ತಪಶೀಲು ಸ್ವತ್ತುಗಳ ವಿವರವನ್ನು ಪರಿಶೀಲಿಸಿದ್ದೇನೆ. ದಿಃ5/2/1982 ರ ಅಗ್ರಿಮೆಂಟ್ ಮೂಲಕ ಪುಟ್ಟಮಾದಯ್ಯ ಅಲಿಯಾಸ್ ಬುಂಡಯ್ಯನ ಪುಟ್ಟಮಾದಯ್ಯನ ಪತ್ನಿ ಮಾದಮ್ಮ ಹಾಗು ಆಕೆಯ ಮಗ ಮಹದೇವರವರು 7 ನೇ ಪ್ರತಿವಾದಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂಬುದು ನನಗೆ ಗೊತ್ತು ಎಂದರೆ ನಿಜ. ದಾವಾ ದಖಲಿಸುವ ಮೊದಲು ಆಬಗ್ಗೆ ನನಗೆ ಗೊತ್ತಿತ್ತು

ಎಂದರೆ ಸರಿಯಲ್ಲ. ಲಿಖಿತ ತಕರಾರಿನ ತಪಶೀಲು ಸ್ವತ್ತಿನ ಪೂರ್ವಕ್ಕೆ ಸ ನಂ.73/2 ಎ ಇರುವುದು ಎಂದರೆ ನಿಜ. ಅದನ್ನು 7 ನೇ ಪ್ರತಿವಾದಿ ಸ್ವಾ ದೀನಾನುಭಾವಹೋಂದಿ ಅನುಭವಿಸುತ್ತಿದ್ದಾರೆ ಎಂದರೆ ನಿಜ. ದಾವೆ ದಾಖಲಿಸುವ ಮೊದಲೆ ಅದು ಗೊತ್ತಿತ್ತು ಎಂದರೆ ನಿಜ. ಯಾವುದೇ ವ್ಯಕ್ತಿಗೆ ಆತನ ಸ್ವತ್ತುಗಳ ಚಕ್ಕುಬಂದಿ ಗೊತ್ತಿರುತ್ತೆ ಎಂದರೆ ನಿಜ. ನಾನು ಈ ದಾವೆಯಲ್ಲಿ 7 ಸ್ವತ್ತುಗಳನ್ನು ಸ ನಂ. ನಮೂದಿಸಿ ಕಾಣಿಸಿದ್ದೇನೆ ಎಂದರೆ ನಿಜ. ಅವುಗಳ ಚಕ್ಕುಬಂದಿಯನ್ನು ಸ್ವಷ್ಟವಾಗಿ ದಾವಾ ಪತ್ರದಲ್ಲಿ ನಮೂದಿಸಲು ತೊಂದರೆ ಇತ್ತೇ ಎಂದು ಕೇಳಿದರೆ ತೊಂದರೆ ಇರಲಿಲ್ಲ ಎಂದು ನುಡಿಯುತ್ತೇನೆ. ವಾದಿಗಳಿಗೆ ಪ್ರತಿವಾದಿ 1 ರಿಂದ 3, 8 ರಿಂದ 10 , 11 ರಿಂದ 15 ರವರಿಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ಸಂಬಂಧ ಇಲ್ಲವಾದ್ದರಿಂದ ದಾವಾ ತಪಶೀಲಿನಲ್ಲಿ ಚಕ್ಕುಬಂದಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ತುಂಡುಭೂವಿಗಳ ಪರಬಾರೆ ನಿಶೇಧ ಕಾಯ್ದೆ ಚಾಲ್ತಿಯಲ್ಲಿದ್ದ ಕಾರಣ ಸದರಿ ಅಗ್ರಿಮೆಂಟ್ ಅನ್ನು ಮಾಡಿ ಸ್ವತ್ತು ಮಾರಾಟ ಮಾಡಿರುವುದು ಎಂದರೆ ಸರಿಯಲ್ಲ. ಕಾಯ್ದೆ ರದ್ದಾದ ನಂತರ ಕ್ರಯಪತ್ರ ನೋಂದಣಿ ಮಾಡಿಕೊಡುವುದಾಗಿ ಕರಾರಿನಲ್ಲಿ ಒಕ್ಕಣೆ ಇದೆಎಂದರೆ ಸರಿಯಲ್ಲ. ದಾವಾ ಪತ್ರದಲ್ಲಿ ಐಟಂ 2 ಮತ್ತು 3 ನ್ನು ಹೊರತು ಇತರೆ ಐಟಂ ಗಳಾದ 1, 4 ರಿಂದ 7 ಗಳನ್ನು 4 ರಿಂದ 6 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ನಿಜ. ಈ ದಾವೆ ದಾಖಲಿಸುವ ಮೊದಲೆ ಅದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾವು ವಾರಕ್ಕೆ ಕೊಟ್ಟಿದ್ದೆವು ಹೊರತ ಮಾರಾಟ ಮಾಡಿಲ್ಲ. ಆರೀತಿ ವಾರಕ್ಕೆ ಕೊಟ್ಟಿದ್ದು ಎಂದು ವಾದಪತ್ರದಲ್ಲಿ ನಮೂದಿಸಿಲ್ಲ ಇದೇ ಮೊಟ್ಟಮೊದಲ ಬಾರಿಗೆ ಆರೀತಿ ವಾರಕ್ಕೆ ಕೊಟ್ಟಿದ್ದು ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಬುಂಡಯ್ಯ ಅಲಿಯಾಸ್ ಬುಂಡ ರವರ ಮಗಳು ಮಾದಮ್ಮ ರವರ ನೈಜ ವಾರಸುದಾರರು ನಾವಲ್ಲವಾದ್ದರಿಂದ ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ. 1971 ರಿಂದ ಅನ್ವಯಿಸುವಂತೆ ಇಂದಿನವರೆಗೂ ಕೂಡ ಕಲಂ ನಂ.12 ರಲ್ಲಿ 7 ನೇ ಪ್ರತಿವಾದಿ ರಂಗಯ್ಯನ ಹೆಸರು ಮುಂದುವರಿಯುತ್ತಿದೆ ಎಂದರೆ 2005 ರಲ್ಲಿ ಅವರ

| ಓ ಎಸ್ | 48/2014 | ಪಿ.ಡಬ್ಲ್ಯೂಃ 1 |
| --- | --- | --- |

ಹೆಸರು ಸೇರಿಸಿರುವುದು ಎಂದು ನುಡಿಯುತ್ತೇನೆ. ಆರೀತಿ ಸೇರಿಸಿರುವುದು ತಪ್ಪು ಹಾಗು ಅದನ್ನು ಕೈಬಿಡಿ ಎಂದು ಕಂದಾಯ ಮೇಲ್ಮನವಿ ಸಲ್ಲಿಸಿಲ್ಲ. ಈ ದಾವೆಯಲ್ಲಿ 1 ರಿಂದ 3 , 8 ರಿಂದ 10 , 11 ರಿಂದ 15 ನೇ ಪ್ರತಿವಾದಿಗಳು ದಾವೆಯಲ್ಲಿ ತಕರಾರು ಸಲ್ಲಿಸಿದ್ದಾರೆಯೇ ಎಂದು ನನಗೆ ಗೊತ್ತಿಲ್ಲ. ಅವರಿಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ಹಕ್ಕು ಸಂಬಂಧ ಇಲ್ಲವಾದ್ದರಿಂದ ಅವರು ಬಂದಿಲ್ಲ ಎಂದರೆ ಸರಿಯಲ್ಲ. ವಿನಾಕಾರಣ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುವುದು ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇತರೆ ಪ್ರತಿವಾದಿಗಳಿಂದಃ

ಯಾವುದೇ ಕೊರಿಕೆ ಇಲ್ಲ. ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.